



ಡಾ. ಎಸ್. ರಾಮಮೂರ್ತಿ

# 2-4-2015ರಿಂದ 8-4-2015ರವರೆಗೆ



**ಮೇಷ**

ವಾರದ ಮಧ್ಯಭಾಗದವರೆಗೂ ಅನುಕೂಲ. ಮನಃಶಾಂತಿ, ನಿರೀಕ್ಷಿಸಿದ ಹಣ ಬರುವುದು. ಉದ್ಯೋಗದಲ್ಲಿ ಮುನ್ನಡೆ, ವಿದೇಶಿ ವ್ಯವಹಾರಗಳಲ್ಲಿ ಆಸಕ್ತಿ, ಹಿರಿಯರೊಂದಿಗೆ ವಿಚಾರ ವಿಮರ್ಶೆ, ವಿರೋಧಿಗಳ ಉಪದ್ರವ ಕಡಿಮೆಯಾಗುವುದು, ವಾರಾಂತ್ಯದಲ್ಲಿ ಒತ್ತಡ. ಕಾರ್ಯ ಹಿನ್ನಡೆ, ವ್ಯಾಪಾರದಲ್ಲಿ ಹಾನಿ, ಅನಾರೋಗ್ಯ. ಶುಭ ದಿನ: 5. ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ.



**ವೃಷಭ**

ವಾರದ ಆರಂಭದಲ್ಲಿ ಭಯ. ಕೆಲಸದಲ್ಲಿ ಆತ್ಮವಿಶ್ವಾಸದ ಕೊರತೆ. ವ್ಯಾಪಾರದಲ್ಲಿ ಹಿನ್ನಡೆ, ಮಕ್ಕಳಿಂದ ಒತ್ತಡ. ಮನೋಬಲ ಹೆಚ್ಚುವುದು. ತಾಳ್ಮೆಯಿಂದ ಮಾತನಾಡುವಿಕೆ. ಉದ್ಯೋಗದಲ್ಲಿ ಪ್ರಗತಿ, ಗಣ್ಯರಿಂದ ಸಹಾಯ, ಕುಟುಂಬ ಸದಸ್ಯರಲ್ಲಿ ಒಮ್ಮತ. ಪ್ರಯಾಣ ಸೌಖ್ಯ, ಹಿತಕರ ಸಂದೇಶ. ಶುಭ ದಿನ: 6. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಮಿಥುನ**

ವಾರದ ಆರಂಭದಲ್ಲಿ ವಿಪರೀತ ಶ್ರಮ. ಕೆಲಸ ಕಾರ್ಯಗಳಲ್ಲಿ ಅಡಚಣೆ. ಲೆಕ್ಕಪತ್ರಗಳ ವಿಚಾರದಲ್ಲಿ ಒತ್ತಡ, ಸಣ್ಣ ಪುಟ್ಟ ಪೆಟ್ಟಾಗುವ ಸಂಭವ, ವಾರದ ಮಧ್ಯಭಾಗದಿಂದ ಅನುಕೂಲ. ಮನಃಶಾಂತಿ, ತಾಳ್ಮೆಯ ಮಾತುಗಳಿಗೆ ಗೌರವ. ಉದ್ಯೋಗದಲ್ಲಿ ಪ್ರಗತಿ, ವ್ಯಾಪಾರ ವ್ಯವಹಾರಗಳಲ್ಲಿ ಲಾಭ, ಆತ್ಮೀಯರೊಂದಿಗೆ ಸಮಾಲೋಚನೆ. ಶುಭ ದಿನ: 5. ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ.



**ಕಟಕ**

ವಾರದ ಆರಂಭದಲ್ಲಿ ಸಂತಸ. ಆಟ ಪಾಠಗಳಲ್ಲಿ ಮುನ್ನಡೆ. ಉದ್ಯೋಗದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಸೋಮಾರಿತನ. ಅಕಾಲ ಭೋಜನ. ಕಾರ್ಯಕಲಾಪಗಳಲ್ಲಿ ಅಡಚಣೆ, ವ್ಯಾಪಾರದಲ್ಲಿ ಹಿನ್ನಡೆ. ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಆರೋಗ್ಯ ವ್ಯತ್ಯಯ. ಶುಭ ದಿನ: 3. ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ.



**ಸಿಂಹ**

ವಾರದ ಮಧ್ಯಭಾಗದವರೆಗೂ ಅನುಕೂಲ. ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ಲಾಭ, ಹಿರಿಯರಿಂದ ಮಾರ್ಗದರ್ಶನ. ಸಂಘ ಸಂಸ್ಥೆಗಳಿಂದ ಸಹಾಯ. ಭೂಮಿ ವಿಚಾರದಲ್ಲಿ ಸಮಾಧಾನ. ಅಧ್ಯಯನದಲ್ಲಿ ಮುನ್ನಡೆ. ವಾರಾಂತ್ಯದಲ್ಲಿ ಬೇಸರ. ಅಹಿತ ಭೋಜನ, ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭ ದಿನ: 5. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.



**ಕನ್ಯಾ**

ವಾರದ ಆರಂಭದಲ್ಲಿ ಬೇಸರ, ಹಿರಿಯರೊಂದಿಗೆ ವಿವಾದ ಸಂಭವ. ಕಾರ್ಯಕಲಾಪಗಳು ಸಮಯಕ್ಕೆ ಸರಿಯಾಗಿ ಮುಗಿಯದೆ ಒತ್ತಡ. ಶತ್ರು ಭೀತಿ, ವಾರದ ಮಧ್ಯಭಾಗದಿಂದ ಅನುಕೂಲ. ಧೈರ್ಯ ಪ್ರಾಪ್ತಿ, ಉದ್ಯೋಗದಲ್ಲಿ ಪ್ರಗತಿ, ವ್ಯಾಪಾರದಲ್ಲಿ ಲಾಭ, ನಿರೀಕ್ಷಿತ ಸಂದೇಶಗಳ ಆಗಮನ, ಪ್ರಯಾಣದಲ್ಲಿ ನಿರಾತಂಕ. ಶುಭ ದಿನ: 6. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.



**ತುಲಾ**

ವಾರದ ಆರಂಭದಲ್ಲಿ ಅಧಿಕ ಖರ್ಚು. ಕೆಲಸ ಕಾರ್ಯಗಳಲ್ಲಿ ತಪ್ಪುಗಳಾಗಿ ಒತ್ತಡ. ವ್ಯಾಪಾರದಲ್ಲಿ ಹಿನ್ನಡೆ. ಗ್ರಾಹಕರೊಂದಿಗೆ ಕಲಹ ಸಂಭವ. ವಾರದ ಮಧ್ಯಭಾಗದಿಂದ ಚೇತರಿಕೆ. ಆತ್ಮ ಬಲ ಹೆಚ್ಚುವುದು. ಉದ್ಯೋಗದಲ್ಲಿ ಸಮಾಧಾನ, ಕ್ರಯವಿಕ್ರಯಗಳಲ್ಲಿ ಲಾಭ. ಕುಟುಂಬದಲ್ಲಿ ಶಾಂತ ವಾತಾವರಣ. ಪ್ರಯಾಣ ಸೌಖ್ಯ. ಶುಭ ದಿನ: 6. ದುರ್ಗಾ ಮತ್ತು ದತ್ತಾತ್ರೇಯ ಅಷ್ಟೋತ್ತರ ಪಠಿಸಿ.



**ವೃಶ್ಚಿಕ**

ವಾರದ ಆರಂಭದಲ್ಲಿ ಸಂತಸ. ಶ್ರಮವಿಲ್ಲದೆ ಕಾರ್ಯಸಾಧನೆ. ಆತ್ಮೀಯರ ಭೇಟಿ. ಲೇವಾದೇವಿಗಳಲ್ಲಿ ಲಾಭ. ಕುಟುಂಬ ಸದಸ್ಯರ ಸಹಕಾರ. ವಾರದ ಮಧ್ಯಭಾಗದಲ್ಲಿ ಆತಂಕ. ಸಣ್ಣಪುಟ್ಟ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆ. ಅಧಿಕಾರಿಗಳ ಮೇಲೆ ಸಿಟ್ಟು. ವ್ಯಾಪಾರದಲ್ಲಿ ಹಾನಿ, ಆರೋಗ್ಯ ವ್ಯತ್ಯಯ. ವಾರಂತ್ಯದಲ್ಲಿ ಮುನ್ನಡೆ. ಶುಭ ದಿನ: 3. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.



**ಧನಸ್ಸು**

ವಾರದ ಮಧ್ಯಭಾಗದವರೆಗೂ ಸಮಾಧಾನ. ಕಾರ್ಯಕಲಾಪಗಳಲ್ಲಿ ಯಶಸ್ಸು. ಕ್ರಯ ವಿಕ್ರಯಗಳಲ್ಲಿ ಲಾಭ. ಅಪಾಯದಿಂದ ಪಾರಾಗುವಿಕೆ. ಗಣ್ಯರಿಂದ ಸಲಹೆ. ವಾಹನ ಸೌಖ್ಯ. ಹಿತೈಷಿಗಳ ಭೇಟಿ, ಕುಟುಂಬ ಸದಸ್ಯರೊಡನೆ ಸಮಾಲೋಚನೆ. ಮಕ್ಕಳಿಂದ ಒತ್ತಡ, ಉದ್ಯೋಗ ವೃತ್ತಿಗಳಲ್ಲಿ ಅಶಾಂತಿ, ವ್ಯಾಪಾರದಲ್ಲಿ ಹಾನಿ. ಶುಭ ದಿನ: 5. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಮಕರ**

ವಾರದ ಆರಂಭದಲ್ಲಿ ಅಶಾಂತಿ. ಮಿತ್ರರಿಂದ ಅಸಹಕಾರ. ಕೆಲಸಕಾರ್ಯಗಳಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ಆರೋಗ್ಯ ವ್ಯತ್ಯಯ, ವಾರದ ಮಧ್ಯಭಾಗದಿಂದ ಅನುಕೂಲ. ಆಟ ಪಾಠಗಳಲ್ಲಿ ಮೇಲುಗೈ, ಉದ್ಯೋಗದಲ್ಲಿ ಮುನ್ನಡೆ, ವ್ಯಾಪಾರದಲ್ಲಿ ಸೂಕ್ತ ಲಾಭ, ದೀರ್ಘಕಾಲದ ಸ್ನೇಹಿತರ ಭೇಟಿ, ಹಿತವಾರ್ತೆ. ಶುಭ ದಿನ: 6. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಕುಂಭ**

ವಾರದ ಆರಂಭದಲ್ಲಿ ಚಿಂತೆ. ಹಣದ ವಿಚಾರದಲ್ಲಿ ವಾದವಿವಾದ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ, ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಧೈರ್ಯ, ಕೆಲಸ ಕಾರ್ಯಗಳು ಸರಿಯಾಗಿ ಮುಗಿಯುವುದು. ವ್ಯಾಪಾರ ವೃತ್ತಿಗಳಲ್ಲಿ ನಿರೀಕ್ಷಿತ ಲಾಭ, ಸಾಧುಸಂತರ ಭೇಟಿ, ಪ್ರಯಾಣದಲ್ಲಿ ನಿರಾತಂಕ. ಶುಭ ದಿನ: 6. ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ.



**ಮೀನ**

ವಾರದ ಆರಂಭದಲ್ಲಿ ಸಮಾಧಾನ. ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಫಲ. ಅಧ್ಯಯನದಲ್ಲಿ ಮೇಲುಗೈ. ಖರ್ಚು ನಿಯಂತ್ರಣಕ್ಕೆ ಬರುವುದು. ವಾರದ ಮಧ್ಯಭಾಗದಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ, ಅಕಾಲ ಭೋಜನ, ಮಕ್ಕಳಿಂದ ತೊಂದರೆ. ವ್ಯವಹಾರಗಳಲ್ಲಿ ಹಿನ್ನಡೆ, ಹಿಂದಿನ ತಕರಾರುಗಳನ್ನು ಬಗೆಹರಿಸಿಕೊಳ್ಳುವ ಚಿಂತನೆ. ಶುಭ ದಿನ: 3. ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ.